## ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿ ಸಿ ನಂ. 824/2017

ದಿಃ **10-02-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

| | | | |
|---|---|---|---|
| ಹೆಸರು | ನಯಾಜ್ ಬೇಗ್ | ಸಿ.ಡಬ್ಲ್ಯೂ | **18** |
| ವಯಸ್ಸು | 47 ವರ್ಷ | ಪಿ.ಡಬ್ಲ್ಯು: | **07** |
| ತಂದೆಯ / ಗಂಡನ ಹೆಸರು | ಲೇಟ್ ಇಬ್ರಾಹಿಂ ಬೇಗ್ | | |
| ವೃತ್ತಿ | ಪಿ.ಐ | | |
| ವಾಸಸ್ಥಳ | ಚಿಕ್ಕಬಳ್ಳಾಪುರ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 15-05-2015 ರಿಂದ 02-02-2017 ರವರೆಗೆ ಗೌರಿಬಿದನೂರಿನ ಪುರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26-10-2016 ರಂದು ಬೆಳಗ್ಗೆ 6.30 ಗಂಟೆಗೆ ಫ್ರಾಸಾ -2 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-6 ಅನ್ನು ಸ್ವೀಕರಿಸಿ ಪ್ರವ ವರದಿಯನ್ನು ನೊಂದಣಿ ಮಾಡಿಕೊಂಡು ನನ್ನ ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ನಿಪಿ-6 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನಿಪಿ**-6** ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-6 ರ ಪ್ರವ ವರದಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**-14** ಎಂದು ಅದರಲ್ಲಿರುವ ಸಹಿಯನ್ನು ನಿಪಿ**-14** ಎ ಎಂದು ಗುರುತಿಸಲಾಯಿತು.

ನಂತರ 7.30 ಗಂಟೆ ಸಮಯಕ್ಕೆ ಗೌರಿಬಿದನೂರಿನ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಚಾಸಾ-6 ರಿಂದ 9 ರವರ ಸಮಕ್ಷಮ ಮೃತ ರವಿ ಕುಮಾರ್ ಬಿನ್ ಲಕ್ಷ್ಮೀಪತಿ ರವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಗೆ ದಿನಾಂಕ 26-10-2016 ರ ಶವ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**-15** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**-15** ಎ ಎಂದು

ಗುರುತಿಸಲಾಯಿತು. ಸದರಿ ಸಮಯದಲ್ಲಿ ಚಾಸಾ-10 ರಿಂದ 13 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಬೆಳಗ್ಗೆ 11.00 ಗಂಟೆ ಸಮಯಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಗ್ಗೆ 11.30 ರಿಂದ 12.00 ರವರೆಗೆ ನಿಪಿ-7 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿಗೆ ನಿಪಿ-7 ಅನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**7** ಬಿ ಎಂದು ಗುರುತಿಸಲಾಯಿತು. ಕೃತ್ಯದಲ್ಲಿ ಭಾಗಿಯಾಗಿದ್ದ ಎಪಿ21 ಎಕ್ಸ್ 2038 ಲಾರಿಯನ್ನು ಮತ್ತು ಕೆಎ 06 ಇಎಫ್ 7805 ದ್ವಿಚಕ್ರ ವಾಹನವನ್ನು ನಿಪಿ-7 ರಂತೆ ಅಮಾನತ್ತುಪಡಿಸಿಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತೇನೆ. ಸಾಕ್ಷಿಗೆ ಒಂದು ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**16** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**16** ಎ ಎಂದು ಗುರುತಿಸಲಾಯಿತು.

ನಂತರ ಪೋಲೀಸ್ ಠಾಣೆಗೆ ಬಂದು ಸ್ವತ್ತಿನ ಪಟ್ಟಿಯನ್ನು ತಯಾರು ಮಾಡಿ ನ್ಯಾಯಾಲಯದ ಅನುಮತಿಯನ್ನು ಪಡೆದಿರುತ್ತೇನೆ. ಸಾಕ್ಷಿಗೆ ದಿನಾಂಕ 26-10-2016 ರ ಸ್ವತ್ತಿನ ಪಟ್ಟಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**17** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**17** ಎ ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಪ್ರಾಸಾ-6 ರವರಿಗೆ ವರ್ಗಾವಣೆ ಮಾಡಿರುತ್ತೇನೆ.

<u>ಪಾಟೀ ಸವಾಲುಃ ಆಪಾದಿತನ ಪರ ವಕೀಲರಾದ ಶ್ರೀ. ಬಿ.ಎಲ್ ರವರಿಂದಃ</u>

ನನಗೆ ಈ ಪ್ರಕರಣದ ಘಟನೆಯ ಬಗ್ಗೆ ದಿನಾಂಕ 25-10-2016 ರಂದು ರಾತ್ರಿ 9.00 ಗಂಟೆಯಿಂದ ಮರುದಿನ ಬೆಳಗ್ಗೆ 6.30 ರವರೆಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳುತ್ತಿರುವ ರಸ್ತೆ ತುಂಬಾ ಹದಗೆಟ್ಟಿತ್ತು ಎಂದರೆ ನೆನಪಿಲ್ಲ. ರಸ್ತೆಯ ಎರಡೂ ಬದಿಗಳಲ್ಲಿ ಬೃಹತ್ ಮರಗಳು ಇವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ರಸ್ತೆಯ ಉಬ್ಬು ಇದೆ ಎಂದರೆ ಗೊತ್ತಿಲ್ಲ. ಸದರಿ ರಸ್ತೆಯ ಉಬ್ಬಿನ ನಂತರ 2 ರಸ್ತೆ ಗುಂಡಿಗಳು ಇದ್ದವು ಎಂದರೆ ಗೊತ್ತಿಲ್ಲ. ಸದರಿ ರಸ್ತೆಯಲ್ಲಿ ಯಾವುದೇ ವಿದ್ಯುತ್

ದೀಪ ಇರಲಿಲ್ಲ ಎಂದರೆ ಗೊತ್ತಿಲ್ಲ. ಸದರಿ ರಸ್ತೆಯಲ್ಲಿ ಜನಸಂದಣಿ ಇರುವ ರಸ್ತೆ ಇರುವ ಎಂದರೆ ವಾಹನಗಳು ಓಡಾಡುತ್ತವೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-16 ಈ ಪ್ರಕರಣದ ಘಟನೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನಕ್ಕೆ ಹೆಡ್ ಲೈಟ್ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಪಘಾತದ ಕಾರಣಕ್ಕಾಗಿ ಹೆಡ್ ಲೈಟ್ ಜಖಂಗೊಂಡಿರುತ್ತದೆ ಎಂದು ನುಡಿಯುತ್ತಾರೆ. ದ್ವಿಚಕ್ರ ವಾಹನ ಸವಾರನು ರಸ್ತೆ ಉಬ್ಬನ್ನು ಹಾರಿಸಿ ಗುಂಡಿಯಲ್ಲಿ ಬಿದ್ದು ಸ್ವಯಂ ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿರುವುದು ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು